ಅಸಲು ದಾವೆ ನಂ. 215/2018 ಪಿ.ಡಬ್ಲೂ 1– ಕಲ್ಲಪ್ಪ ಮರಬಸಪ್ಪನವರ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 06/07/2022 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ– ಪ್ರತಿವಾದಿಗಳ ಪರ ಶ್ರೀ ಸಿ. ವಾಯ್. ಹುನಗುಂದ ವಕೀಲರಿಂದಃ**

1. ನನ್ನ ತಂದೆಯ ಹೆಸರು ಮಲ್ಲಪ್ಪ. ನನ ತಂದೆಯ ತಂದೆಯ ಹೆಸರು ಮುದುಕಪ್ಪ , ನನ್ನ ತಾಯಿಯ ತಂದೆಯ ಹೆಸರು ಯಮನಪ್ಪ. ನನ್ನ ತಂದೆಗೆ 4 ಎಕರೆ 37 ಗುಂಟೆ ಮತ್ತು ಒಂದು ಮನೆ ಮಾತ್ರ ಇರುತ್ತದೆ. ನನ್ನ ತಂದೆಗೆ ಈ ಎರಡು ಆಸ್ತಿ ಮಾತ್ರ ಇರುತ್ತದೆ. ನನ್ನ ತಂದೆಗೆ ಸೇರಿದ 4 ಎಕರೆ 37 ಗುಂಟೆ ಯ ಉತ್ತರಕ್ಕೆ ಜಿಗಳೂರು ಎಂಬುವವರ ಜಮೀನು ಇರುತ್ತದೆ, ದಕ್ಷಿಣಕ್ಕೆ ಮತ್ತು ಪೂರ್ವಕ್ಕೆ ಜಕ್ಕಲಿ ಇವರ ಹೊಲ ಇರುತ್ತದೆ, ಪಶ್ಚಿಮಕ್ಕೆ ಜಿಗಳೂರು ಇವರ ಜಮೀನು ಇರುತ್ತದೆ. ಸದರಿ ಚೆಕ್ಕುಬಂದಿಯ ಜಮೀನುಗಳ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಈ ಚೆಕ್ಕುಬಂದಿಯ ಮಧ್ಯೆದಲ್ಲಿರುವ ಜಮೀನು ನನ್ನ ತಂದೆಗೆ ಸೇರಿದ ಜಮೀನು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನನ್ನ ತಂದೆಗೆ ಇರುವ ಮನೆಯ ನಂಬರ 660, ಅದು ಜಕ್ಕಲಿ ಗ್ರಾಮದಲ್ಲಿದೆ.

2. ನನ್ನ ತಾಯಿ ಬಸವ್ವ ಇವಳಿಗೆ ಪಿತ್ರಾರ್ಜಿತವಾಗಿ 2 ಮನೆ , 1 ಎಕರೆ 31 ಗುಂಟೆ ಜಮೀನು ಜಕ್ಕಲಿ ಗ್ರಾಮದಲ್ಲಿತ್ತು. ಸದರಿ ಮನೆಯ ನಂಬರ ನನಗೆ ನೆನಪಿಲ್ಲ. ವಿ.ಪಿ.ಸಿ. ನಂ.654 ನನ್ನ ತಾಯಿಗೆ ಸೇರಿದ ಮನೆ ಎಂದರೆ ನಿಜ. ಮತ್ತೊಂದು ಮನೆ ವಿ.ಪಿ.ಸಿ.ನಂಬರ 646 ಇರುತ್ತದೆ ಎಂದರೆ ನಿಜ. ಮನೆ ವಿ.ಪಿ.ಸಿ.ನಂಬರ 646 ನ್ನು ಸಂಗಪ್ಪ ಕೆಂಪಸಂಗಣ್ಣವರ ಎಂಬುವವರಿಗೆ ನನ್ನ ತಂದೆ ಮಾರಾಟ ಮಾಡಿದ್ದಾರೆ. ನಾನು ನಮ್ಮ ತಂದೆ ಮನೆಯಲ್ಲಿ ಇದ್ದೇನೆ, ಅದರ ನಂಬರ ನನಗೆ ಗೊತ್ತಿಲ್ಲ.

3. ನನ್ನ ತಾಯಿ ಬದುಕಿದ್ದಾಗಲೇ ಬಸಪ್ಪ ಮತ್ತು ಯಮನಪ್ಪ ಬೇರೆ ಆಗಿದ್ದರು ಎಂದರೆ ನಿಜ. ಅವರು ಯಾವಾಗ ಬೇರೆ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಬೇರೆ ಆಗಿ 30 ವರ್ಷ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಯಮನಪ್ಪ ಮತ್ತು ಬಸಪ್ಪ ನಾನು ಹುಟ್ಟವ ಮುಂಚೆಯೇ ಬೇರೆ ಆಗಿದ್ದಾರೆ. ನನ್ನ ತಾಯಿ ಬಸವ್ವ , ಅವರ ತಂದೆಯಿಂದ ಬಂದಂತಹ ಮನೆಯ ಕಬ್ಜಾ ವಹಿವಾಟಿನಲ್ಲಿದ್ದರು ಎಂದರೆ ಸಾಕ್ಷಿ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದರು ಎಂದು

ಹೇಳುತ್ತಾರೆ. ನನ್ನ ತಾಯಿ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದರು ಎಂದು ತೋರಿಸಲು ಉತಾರ ಹಾಜರು ಮಾಡಿರುತ್ತೇನೆ. ದಾವಾ ಆಸ್ತಿಗಳು ಬಸಪ್ಪ ಮತ್ತು ಅಂದಾನಪ್ಪ ಇವರ ಪಾಲಿಗೆ ಬಂದಿತ್ತು ಎಂದರೆ ಸರಿ ಅಲ್ಲ. ವಿ.ಪಿ.ಸಿ.646 ನನ್ನ ತಾಯಿ ಬಸವ್ವ ಇವಳ ಹಿಸ್ಸೆ ಬಂದಿತ್ತು ಎಂದರೆ ನಿಜ. ನಾನು ಮತ್ತು ನನ್ನ ತಾಯಿ ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿ ಅಲ್ಲ, ಸಾಕ್ಷಿ ನಾವು ಹೆಸರು ಬಿತ್ತಿದ್ದೇವೆ ಎಂದು ಹೇಳುತ್ತಾರೆ. ನಾನು ಸುಮಾರು 40 ವರ್ಷಗಳಿಂದ ದಾವಾ ಆಸ್ತಿ ಸ್ವಾಧೀನದಲ್ಲಿರುತ್ತದೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನಮ್ಮ ತಂದೆಗೆ ಒಬ್ಬ ಗಂಡು ಮಗ, ಆರು ಜನ ಹೆಣ್ಣು ಮಕ್ಕಳು. ಜಕ್ಕಲಿಗೆ ಹನಮವ್ವ ಇವಳನ್ನು ಮದುವೆ ಮಾಡಿಕೊಡಲಾಗಿದೆ. ಉಳಿದವರನ್ನು ಬೇರೆ ಊರಿಗೆ ಮದುವೆ ಮಾಡಿಕೊಡಲಾಗಿದೆ. ಜಕ್ಕಲಿ ಗ್ರಾಮದಲ್ಲಿ ನಮ್ಮ ಬೀಗರು ಬಹಳಷ್ಟು ಜನ ಇದ್ದಾರೆ ಎಂದರೆ ನಿಜ. ನಾನು ಪ್ರತಿವಾದಿಗಳ ಸ್ವಾಧೀನಕ್ಕೆ ಧಕ್ಕೆ ತರಲು ಪ್ರಯತ್ನ ಮಾಡಿದ್ದೇನೆ ಎಂದರೆ ಸರಿ ಅಲ್ಲ.

**ಮುಂದುವರೆದ ಪಾಟೀ ಸವಾಲುಃ- ಸಮಯ ಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**